ಹೊತ್ತ ಹರಕೆಗಳನ್ನೆಲ್ಲಾ ತೀರಿಸಿದರೆ ಸರಿ ಹೋದೀತು ಎಂಬ ನಿರ್ಧಾರಕ್ಕೆ ಬಂದ ಮೂಕಮ್ಮ, ಅಂತೂ ಇಂತೂ ಗಂಡನನ್ನು ಒಪ್ಪಿಸಿ ಒಂದೊಂದೇ ದೇವಸ್ಥಾನದ ಮೆಟ್ಟಿಲು ಹತ್ತಿಳಿದರು. ಶೃಂಗೇರಿ, ಧರ್ಮಸ್ಥಳ, ಸುಬ್ರಹ್ಮಣ್ಯ ದೇವರಿಗೆಲ್ಲಾ ಅಡ್ಡಡ್ಡ ಬಿದ್ದ ನಂತರ ಮಂತ್ರಾಲಯಕ್ಕೆಂದು ಹೊರಟರು. ಮೂರ್ನಾಲ್ಕು ದೇವಸ್ಥಾನಗಳ ಪ್ರಸಾದ ಒಂದರ ಹಿಂದೊಂದು ಹೊಟ್ಟೆಗೆ ಇಳಿದು ಗೋವಿಂದ ಹೊಟ್ಟೆನೋವೆಂದು ಮಂತ್ರಾಲಯಕ್ಕೆ ಹೋಗುವುದರಿಂದ ತಪ್ಪಿಸಿಕೊಂಡ. ಬೇರೆ ದಾರಿಯಿಲ್ಲದೇ ಅವನನ್ನು ಮನೆಯಲ್ಲೇ ಬಿಟ್ಟು ಹೊರಟ ವೆಂಕಟ ಭಟ್ಟರು ಮತ್ತು ಮೂಕಮ್ಮ ರಾಯರ ದರ್ಶನ ಮಾಡಿಕೊಂಡು ವಾಪಸು ಬರುವಾಗ ನಡೆದ ಅಪಘಾತದಲ್ಲಿ ಬಾಯಿಗೆ ನೀರು ಬಿಡಲೂ ಅವಕಾಶ ನೀಡದೆ ತೀರಿಕೊಂಡರು.

ಅಪ್ಪಯ್ಯನ ಬೈಗುಳ ಹಾಗೂ ಅಮ್ಮನ ಅನುಕಂಪದ ನಡುವೆಯೇ ಬೆಳೆದ ಗೋವಿಂದ ತಾಯಿಬೇರು ತುಂಡಾದ ಮರದಂತಾಗಿ ಹೋದ. ಓದು ಬರಹದ ವಿಚಾರದಲ್ಲಿ ದಡ್ಡನೆಂಬ ಕಾರಣಕ್ಕೆ ವೆಂಕಟ ಭಟ್ಟರು ಗೋವಿಂದನಿಗೆ ಯಥೇಚ್ಛವಾಗಿ ಬಾರಿಸುತ್ತಿದ್ದರಾದರೂ ಹಿರಿಮಗನೆಂಬ ಪಟ್ಟದಿಂದ ಅದರ ದುಪ್ಪಟ್ಟು ಪ್ರೀತಿಯನ್ನು ಅವರಿಂದಲೇ ವಸೂಲಿ ಮಾಡುತ್ತಿದ್ದ. ಮೂಕಮ್ಮನಂತೂ ಮಗ ಕೇಳಿದ ತಿಂಡಿಯನ್ನೆಲ್ಲಾ ತಪ್ಪಲೆಗಟ್ಟಲೆ ಮಾಡಿ ಹಾಕುತ್ತಿದ್ದರಿಂದ ಅಪ್ಪಯ್ಯನಂತೆ ಇವನಿಗೂ ಬಾಯಿ ಚಪಲ ಏರಿತ್ತು. ಅಪ್ಪಯ್ಯ, ಅಮ್ಮ ಇದ್ದಷ್ಟು ಕಾಲ ಒಮ್ಮೆಯೂ ಮೈ ಮುರಿದು ಕೆಲಸ ಮಾಡದವನಿಗೆ ಅವರಿಬ್ಬರೂ ಒಟ್ಟಿಗೇ ತೀರಿಕೊಂಡಾಗ ಅಷ್ಟ ದಿಕ್ಕುಗಳಲ್ಲೂ ಕತ್ತಲಾವರಿಸಿ ಬದುಕಿನ ಗತಿ ಅಧೋಗತಿ ಆಯಿತು.

ವೆಂಕಟ ಭಟ್ಟರು ಪೂಜೆ ಮಾಡುತ್ತಿದ್ದ ದೇವಸ್ಥಾನದ ಕಮಿಟಿಯವರು ಗೋವಿಂದನ ಅಸಹಾಯಕತೆಯನ್ನು ಕಂಡು ಮಾನವೀಯತೆ ದೃಷ್ಟಿಯಿಂದ ಕೆಲಸ ಕೊಡುತ್ತೇವೆಂದು ಭಾಷಣ ಬಿಗಿದರು. ವೆಂಕಟ ಭಟ್ಟರಿಗೆ ಕೊಡುತ್ತಿದ್ದಕ್ಕಿಂತ ಐನೂರು ರೂಪಾಯಿ ಕಡಿಮೆ ಮಾಡಿ ತಿಂಗಳಿಗೆ ಕೇವಲ ಸಾವಿರ ರೂಪಾಯಿಯೆಂದು ನಿಗದಿ ಮಾಡಿದರು. ಸಾಲದೆಂಬಂತೆ ತಟ್ಟೆಕಾಸನ್ನು ಮುಟ್ಟುವಂತಿಲ್ಲ ಎಂಬ ಕಟ್ಟಾಜ್ಞೆಯೊಂದಿಗೆ ಗೋವಿಂದನನ್ನು ಅರ್ಚಕನನ್ನಾಗಿಸಿದರು. ಅಪ್ಪಯ್ಯನ ಒತ್ತಾಯಕ್ಕೆ ಸಿಕ್ಕು ನಿತ್ಯಪೂಜೆಯ ಮಂತ್ರ ಕಲಿತಿದ್ದರಿಂದ ಪೂಜೆ ಮಾಡುವುದು ಗೋವಿಂದ ಭಟ್ಟನಿಗೆ ಸಲೀಸಾಯಿತಾದರೂ ಗಣಿತದ ಸಂಕಲನ, ವ್ಯವಕಲನಗಳ ಅರಿವು ಇಲ್ಲದ ಕಾರಣ ತಲುಪಬೇಕಾದ ಕನಿಷ್ಠ ಸಂಬಳದಲ್ಲೂ ಖೋತಾ ಆಗುವುದು ಕಾಯಂ ಆಯಿತು. ಆದರೆ, ಇದ್ಯಾವುದೂ ಗೋವಿಂದ ಭಟ್ಟನ ಗಮನಕ್ಕೆ ಬರುತ್ತಿರಲಿಲ್ಲವಾದ್ದರಿಂದ ಯಾವ ಸಮಸ್ಯೆಯೂ ಇಲ್ಲವೆಂಬಂತೆ ಬದುಕು ಸಾಗಿತು.

ಬ್ಯಾಂಕಿನಲ್ಲಿ ಉದ್ಯೋಗಿಯಾದ ಗುರುರಾಜ ಮದುವೆಯಾದ ವರ್ಷವೇ ಹೆಂಡತಿಯೊಡನೆ ಬೇರೆ ಮನೆ ಮಾಡಿಕೊಂಡು ಶಿವಮೊಗ್ಗ ಪೇಟೆಯಲ್ಲಿ ಬದುಕು ಕಟ್ಟಿಕೊಂಡಿದ್ದ. ತಾನಾಯಿತು ತನ್ನ ಸಂಸಾರವಾಯಿತು ಎಂದು ಬದುಕುತ್ತಿದ್ದವನು ಅಪ್ಪ, ಅಮ್ಮ ಸತ್ತ ನಂತರ ಹಳೇ ಮನೆಗೆ ಹೋಗುವುದನ್ನೂ ಕಡಿಮೆ ಮಾಡಿದ. ಬಾಲ್ಯದಿಂದಲೂ ಗೋವಿಂದ, ಗುರುರಾಜನ ಮಧ್ಯೆ ಹೇಳಿಕೊಳ್ಳುವಂತಹ ಒಡನಾಟವೇನೂ ಇರಲಿಲ್ಲ. ಅಪ್ಪಯ್ಯನ ಸಾವಿನ ನಂತರ ಕಿತ್ತಾಡಿಕೊಳ್ಳಲೂ ಸಣ್ಣ ಮನೆಯೊಂದನ್ನು ಬಿಟ್ಟರೆ, ಚಿನ್ನವಾಗಲೀ, ಕಂತೆ ಕಂತೆ ಹಣವಾಗಲೀ, ಮಣ್ಣಾಗಲೀ ಇರಲಿಲ್ಲ. ಹೀಗಾಗಿ ಅವರಿಬ್ಬರ ಬದುಕಲ್ಲಿ ಪರಸ್ಪರ ನೆನಪಿಟ್ಟುಕೊಳ್ಳುವಂತಹದ್ದೇನೂ ಘಟಿಸಲೇ ಇಲ್ಲ. ಗುರುರಾಜ ಮದುವೆಯ ನಂತರ ಹೊಸ ಮನೆಗೆ ಸ್ಥಳಾಂತರವಾಗುವಾಗ ಅಪ್ಪಯ್ಯನೊಟ್ಟಿಗೆ ಗೋವಿಂದನೂ ಬಂದು ಮನೆಯ ಆಚೀಚೆಗೆಲ್ಲಾ ಕಣ್ಣಾಡಿಸಿದ್ದು ಬಿಟ್ಟರೆ ಮತ್ತೆಂದೂ ಆ ಕಡೆ ಹೋಗಿಯೇ ಇರಲಿಲ್ಲ.

ಅದೊಂದು ದಿನ ಬ್ಯಾಂಕಿಗೆ ಹೊರಟ ಗುರುರಾಜನಿಗೆ ಅರ್ಧ ದಾರಿಯಲ್ಲಿ ಮೊಪೆಡ್ಡು ಕೈ ಕೊಟ್ಟಿತು. ಭರಭರನೆ ಪೆಡಲ್ಲು ತುಳಿದು, ತಳ್ಳಿಕೊಂಡು ಓಡಿ, ನಾಲ್ಕಾರು ಬಾರಿ ಒದ್ದು, ಬಗ್ಗಿಸಿ, ಬೀಳಿಸಿ ಏನೇ